# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬಿ.ಟಿ.ಎಂ ಲೇಔಟ್ ಉಪ-ವಿಭಾಗದ ವಾರ್ಡ್ ಸಂಖ್ಯೆ-152 ಎಸ್.ಜಿ.ಪಾಳ್ಯ ಕಛೇರಿಯಲ್ಲಿ ದಿನಾಂಕ: 05.12.2020 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು

* * * * * *

ದಿನಾಂಕ-05-12-2020ರಂದು ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಅಧ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲ್ಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಅಧ್ಯಕ್ಷರು ಸಲಹೆಯನ್ನು ನೀಡಿರುತ್ತಾರೆ. ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

ಸಭೆಗೆ ಹಾಜರಿದ್ದ ಅಧಿಕಾರಿ ವರ್ಗ/ ಸದಸ್ಯರು

| ಕ್ರ.ಸಂ. | ಹೆಸರು | ಮೊಬೈಲ್ ಸಂಖ್ಯೆ |
|---|---|---|
| 1 | ಶ್ರೀ.ಎಸ್.ಪ್ರಭಾಕರ್, ಮುಖ್ಯ ಅಭಿಯಂತರರು (ಪೂರ್ವ)ಬಿ.ಬಿ.ಎಂ.ಪಿ. | 9480685379 |
| 2 | ಶ್ರೀ.ಸತೀಶ್.ಡಿ ಸ.ಇಂ-152 ವಾರ್ಡ್ | 9964310730 |
| 3 | ಶ್ರೀ.ಅಜಯ್‌ಕುಮಾರ್ ಕಿರಿಯ ಆರೋಗ್ಯ ಪರಿವೀಕ್ಷಕರು | 9632222304 |
| 4 | ಶ್ರೀ. ಎನ್.ಓಬಳೇಶ್,ಹಿರಿಯ ಆರೋಗ್ಯಾ ಪರಿವೀಕ್ಷಕರು | 9945042307 |
| 5 | ಶ್ರಿ ನರಸಿಂಹಮೂರ್ತಿ ಎ.ಎಸ್.ಐ | 9341790989 |
| 6 | ಶ್ರೀಮತಿ.ಸಂಗಿತಾ ಪಾಟೀಲ್ ಪಿ.ಎಸ್.ಐ ಮಡಿವಾಳ ಸಂಚಾರಿ ಪೊಲೀಸ್ | 7204588094 |
| 7 | ಶ್ರೀ ಪುರುಷೋತ್ತಮ, (ಎಲೆಕ್ಟ್ರೀಕಲ್, ಬಿ.ಬಿ.ಎಂ.ಪಿ) | 9611177415 |
| 8 | ಶ್ರೀಮತಿ ಅಶ್ವಿನಿ ಸಹಾಯಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ | 8660967268 |
| 9 | ಶ್ರೀ. ಹರೀಶ್.ಹೆಚ್.ಪಿ ಸಹಾಯಕ ಅಭಿಯಂತರರು ಬಿ.ಡಬ್ಲೂ.ಎಸ್.ಎಸ್.ಬಿ | 9538897735 |
| 10 | ಶ್ರೀಮತಿ.ಆಶಾ.ಹೆಚ್. ಸಹಾಯಕ ಅಭಿಯಂತರರು ಬೇಸ್ಕಾಂ | 9900724229 |
| 11 | ಶ್ರೀ. ಮಂಜುನಾಥ ವಾರ್ಡ್ ಮೇಲ್ವಿಚಾರಕರು | 9740903427 |
| 12 | ಶ್ರೀ ಜೆನ್‌ಸನ್ ಕೆ.ಜೆ, ಮುಖ್ಯಸ್ಥರು ಭುವನಪ್ಪ & ಕಾವೇರಿ ಬಡಾವಣೆ | 9886263222 |
| 13 | ಶ್ರೀ ಸೈಯದ್ ನಜರೂದ್ದಿನ್, ಸದಸ್ಯರು | 9741518897 |
| 14 | ಶ್ರೀ. ಗಂಗಾದ್ರಿ ವಾರ್ಡ್ ಮೇಲ್ವಿಚಾರಕರು | 9900226772 |
| 15 | ಶ್ರೀ ಶಶಿಧರ ಜಿ, ಪೊಲೀಸ್ | 9632135285 |
| 16 | ಶ್ರೀ.ಎಮ್.ಎಸ್. ರಾಮಸುಬ್ರಮಣ್ಯ ಸಹಾಯಕ ಅಭಿಯಂತರರು ರಸ್ತೆ ಮೂಲಭೂ ಸೌಕರ್ಯ(ದಕ್ಷಿಣ) | 6360535661 |
| 17 | ಶ್ರೀ.ಕೆ.ಎ ಸ್ವಾಮಗೌಡ ತೋಟಗಾರಿಕೆ ಇಲಾಖೆ | 9945378326 |
| 18 | ಶ್ರೀ.ಎನ್.ಲೋಕೇಶ್ | 9448579144 |
| 19 | ಶ್ರೀ.ಬಿ.ವಿಶ್ವಕುಮಾರ್ | 9845371963 |
| 20 | ಶ್ರೀ ಮುನೇಂದ್ರ ವಾರ್ಡ್ ಮೇಲ್ವಿಚಾರಕರು ಘ.ತ್ಯಾನಿ | 9901002067 |

1) ಘನತ್ಯಾಜ್ಯ ನಿರ್ವಹಣೆ ಬಗ್ಗೆ.

ಕಳೆದ ಸಭೆಯಲ್ಲಿ ಅಧ್ಯಕರು ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿನ ವಾಣಿಜ್ಯ ತ್ಯಾಜ್ಯ ಸಂಗ್ರಹಣೆ ವಿವರಗಳನ್ನು ಶ್ರೀ.ಓಬಳೇಶ್ ಹಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ಮುಂದಿನ ಸಭೆಯಲ್ಲಿ ಸಲ್ಲಿಸಲು ತಿಳಿಸಲಾಗಿತ್ತು.

ಅದರಂತೆ ಶ್ರೀ.ಓಬಳೇಶ್‌ರವರು ವಿವರವನ್ನು ಸಲ್ಲಿಸಿರುತ್ತಾರೆ, ಆದರೆ ಸಲ್ಲಿಸಿರುವ ವಿವರಗಳು ಪೂರ್ಣಪ್ರಮಾಣದಲ್ಲಿ ಇಲ್ಲದಿರುವ ಕಾರಣ ಮುಂದಿನ ಸಭೆಯಲ್ಲಿ ಸರಿಯಾದ ಮತ್ತು ನಿರ್ದಿಷ್ಟ ವಿವರವನ್ನು ಸಲ್ಲಿಸಲು ಸೂಚಿಸಲಾಯಿತು.



Scanned with CamScanner

2) ಬೇಸ್ಕಾಂ ಇಲಾಖೆಯ ಬಗ್ಗೆ.

ಅಧ್ಯಕ್ಷರು ಮಾತನಾಡಿ ವಾರ್ಡ್‌ವ್ಯಾಪ್ತಿಯಲ್ಲಿ ದುರಸ್ಥಿ ವಿದ್ಯುತ್ ಕಂಬಗಳು ಕಂಡುಬಂದರೆ ಕೂಡಲೇ ದುರಸ್ಥಿಪಡಿಸಲು ತಿಳಿಸಿದರು.

ಶ್ರೀ.ಜಿನ್‌ಸನ್.ಕೆ ಮಾತನಾಡಿ, ಭುವನಪ್ಪ ಬಡಾವಣೆ ಮತ್ತು ಸುತ್ತಮುತ್ತಲಿನ ಸಾರ್ವಜನಿಕ ಪ್ರದೇಶದಲ್ಲಿ ಧೂಮಪಾನ ಮಾಡುತ್ತಿರುವುದು ಹೆಚ್ಚಾಗಿರುತ್ತದೆ ಇದರ ಬಗ್ಗೆ ಅಗತ್ಯಕ್ರಮವಹಿಸಲು ತಿಳಿಸಿರುತ್ತಾರೆ.

ಈ ಬಗ್ಗೆ ಮಡಿವಾಳ ಆರಕ್ಷಕ ಉಪನಿರೀಕ್ಷಕರು ಮಾತನಾಡಿ ಇಂದೇ ಸೂಕ್ತಕ್ರಮವಹಿಸುವುದಾಗಿ ತಿಳಿಸಿರುತ್ತಾರೆ.

ಶ್ರೀ ಸೈದ್ ನಜರುದ್ದಿನ್ ಮಾತನಾಡಿ 6ನೇ ಡಿ ಮುಖ್ಯರಸ್ತೆಯಲ್ಲಿ ಸಿ.ಸಿ.ಟಿ.ವಿ ಅಳವಡಿಸಬೇಕಾಗಿರುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಸಂಬಂಧ ವಾರ್ಡ್ ಅಭಿಯಂತರರು ಮಾತನಾಡಿ, ಸಿ.ಸಿ.ಟಿ.ವಿ ಅಳವಡಿಸುವ ಕಾಮಗಾರಿ ಟೆಂಡರ್ ಪ್ರಕ್ರಿಯೆಲ್ಲಿರುತ್ತದೆ. ಪ್ರಕ್ರಿಯೆ ಪೂರ್ಣಗೊಂಡನಂತರ ಸಿ.ಸಿ.ಟಿ.ವಿಯನ್ನು ಅಳವಡಿಸಲಾಗುವುದು ಎಂದು ತಿಳಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಪಾದಚಾರಿ ರಸ್ತೆಗಳು ಮತ್ತು ಶೌಚಲಯಗಳ ನಿರ್ಮಾಣದ ಅಗತ್ಯತೆಯ ಬಗ್ಗೆ ಸೂಕ್ತ ಸ್ಥಳವಕಾಶಗಳೊಂದಿಗೆ ಮಾಹಿತಿ ನೀಡಲು ಹಾಜರಾಗಿದ್ದ ಸದಸ್ಯರವರಿಗೆ ತಿಳಿಸಲಾಯಿತು.

ಶ್ರೀಮತಿ ಸಂಗಿತಾ ಪಾಟೀಲ್ ಪಿ.ಎಸ್.ಐ ಸಂಚಾರಿ ಪೋಲೀಸ್ ರವರು ಮಾತನಾಡಿ ಸೆಂಟ್‌ಜಾನ್ಸ್ ಸಿಗ್ನಲ್‌ಹತ್ತಿರವಿರುವ ಸ್ಕೈವಾಕ್‌ನ ಲಿಫ್ಟ್ ಚಾಲ್ತಿಯಲ್ಲಿರುವುದಿಲ್ಲ ಹಾಗೂ ಗ್ರೀಲ್ ಅಳವಡಿಸಲು ಪ್ರಸ್ತಾಪಿಸಿರುತ್ತಾರೆ.

ಈ ಸಂಬಂಧ ಅಧ್ಯಕ್ಷರವರು ದೂರವಾಣಿ ಮುಖೇನ ಶ್ರೀ.ಶ್ರೀನಿವಾಸ್ ರಸ್ತೆ ಮೂಲಭೂತ ಸೌಕರ್ಯ ಕೇಂದ್ರ ಕಛೇರಿ ರವರೊಂದಿಗೆ ಮಾತನಾಡಿ 07.12.2020ರೊಳಗೆ ಲಿಫ್ಟ್ ಪ್ರಾರಂಭಿಸಲು ತಿಳಿಸಿದರು ಹಾಗೂ ಗ್ರೀಲ್ ಅಳವಡಿಸುವ ಕಾಮಗಾರಿಯನ್ನು ಸಂಬಂಧ ಪಟ್ಟ ಗುತ್ತಿಗೆದಾರರಿಂದ ಕ್ರಮವಹಿಸಲು ತಿಳಿಸಿದರು.

ಶ್ರೀ.ಅಜಯ್ ಕಿರಿಯ ಆರೋಗ್ಯ ಪರಿವೀಕ್ಷರೊಂದಿಗೆ ಚರ್ಚಿಸಿ ಮಸ್ಟ್ರಿಂಗ್ ಮಾಡುವ ಸ್ಥಳ, ಆಟೋ ಟಿಪ್ಪರ್, ಕಾಂಪ್ಯಾಕ್ಟರ್ ಮತ್ತು ಕಸ ವಿಂಗಡಣೆ ಮಾಡುವ ಛಾಯ ಚಿತ್ರಗಳನ್ನು ಪ್ರತಿ ದಿನ 7 ಗಂಟೆಯೊಳಗಾಗಿ ವಾರ್ಡ್ ಕಮಿಟಿ 152 ವಾಟ್ಸ್‌ಪ್ ಗೂಪ್‌ನಲ್ಲಿ ಕಳುಹಿಸಲು ಸೂಚಿಸಲಾಯಿತು.

ವಾರ್ಡ್ ಅಭಿಯಂತರರು ಮಾತನಾಡಿ ಬೆಂಗಳೂರು ನೀರುಸರಬರಾಜು ಮಂಡಳಿಯವರು ನೀರಿನ ಮತ್ತು ಒಳಚರಂಡಿ ಸಂಪರ್ಕಕ್ಕೆ ರಸ್ತೆಯನ್ನು ಅಗೆದು ಯಥಾಸ್ಥಿತಿ ಕಾಪಾಡದಿರುವುದು ಕಂಡುಬಂದಿರುತ್ತದೆ. ಇದರಿಂದ ರಸ್ತೆಯಲ್ಲಿ ಗುಂಡಿಗಳು ಹೆಚಾಗಿರುತ್ತವೆ ಆದುದರಿಂದ ನಮ್ಮಲ್ಲೇ ಲಭ್ಯವಿರುವ ಕೋಲ್ಡ್ ತಾರ್ ಮತು ಎಮಲ್‌ಷನ್ ಉಪಯೋಗಿಸಿಕೊಂಡು ರಸ್ತೆಗಳನ್ನು ಸುಸ್ಥಿತಿಗೆ ತರಲು ಬಿ.ಡಬ್ಲೂಎಸ್.ಎಸ್.ಬಿ ಸಹಾಯಕ ಅಭಿಯಂತರರವರಿಗೆ ತಿಳಿಸಿದರು.

ಅಧ್ಯಕ್ಷರು ಮಾತನಾಡಿ, ತಾವರಕೆರೆ ಮುಖ್ಯರಸ್ತೆಯನ್ನು ಡಾಂಬರೀಕರಣ ಹಾಗೂ ಕಾಂಕ್ರಿಟ್ ಚರಂಡಿ ಕಾಮಗಾರಿ ವಿಳಂಬವಾಗುತ್ತಿರುವ ಬಗ್ಗೆ ಅಶ್ವೀನಿ ಸಹಾಯಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ರವರರೊಂದಿಗೆ ಪ್ರಸ್ತಾಪಿಸಲಾಯಿತು.

ಈ ಸಂಬಂಧ ಅಶ್ವೀನಿಯವರು ಮಾತನಾಡಿ ತಾವರಕೆರೆ ಮುಖ್ಯರಸ್ತೆ ಕಾಮಗಾರಿಯು ಇನ್ನೂ ಸರ್ಕಾರದ ಹಂತದಲಿದ್ದು, ಅನುಮೋದನೆಗೊಂಡನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ಎಂದು ತಿಳಿಸಿರುತ್ತಾರೆ.

ವಾರ್ಡ್ ವ್ಯಾಪ್ತಿಯಲ್ಲಿ ಅನುಪಯುಕ್ತ ಹಾಗೂ ದುರಸ್ಥಿಯಲ್ಲಿರುವ ಒಳಚರಂಡಿ ಪೈಪ್‌ಗಳು ಕಂಡುಬಂದರೆ ಕೂಡಲೇ ತೆರವುಗೊಳಿಸಲು ಶ್ರೀ.ಹರೀಶ್ ಸಹಾಯಕ ಅಭಿಯಂತರರು ಬಿ.ಡಬ್ಲೂ.ಎಸ್.ಎಸ್.ಬಿ ರವರಿಗೆ ತಿಳಿಸಿದರು.

ಶ್ರೀ ವಿಶ್ವಕುಮಾರ್ ಮಾತನಾಡಿ ಮಾರುತಿನಗರ ಹಾಗೂ ಮಡಿವಾಳ ವ್ಯಾಪ್ತಿಯಲ್ಲಿ ಒಳಚರಂಡಿ ಮ್ಯಾನ್‌ಹೋಲ್‌ಗಳ ಮುಚ್ಚಳಗಳು ಹಾಳಾಗಿದ್ದು, ಕೂಡಲೇ ಹೊಸ ಮುಚ್ಚಳಗಳನ್ನು ಬದಲಾಯಿಸಲು ತಿಳಿಸಿರುತ್ತಾರೆ.

ಈ ಸಂಬಂಧ ಶ್ರೀ ಹರೀಶ್‌ರವರು ಮಾತನಾಡಿ ಸದರಿ ದೂರನ್ನು ಕೂಡಲೇ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು.

S. Prabhakar



Scanned with CamScanner

ಕೊನೆಯದಾಗಿ, ಅಧ್ಯಕ್ಷರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಹ್ಯಾಂಗಿಂಗ್ ಕೇಬಲ್‌ಗಳು ಹೆಚ್ಚಾಗಿದ್ದು, ಮುಂದಿನ ಸಭೆಯೊಳಗಾಗಿ ತೆರವುಗೊಳಿಸಲು ಸೂಚಿಸುತ್ತಾ, ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ. ಸತೀಶ್.ಡಿ)
ಕಾರ್ಯದರ್ಶಿಗಳು
ವಾರ್ಡ್–152 ಎಸ್.ಜಿ.ಪಾಳ್ಯ

S. Prabhakar
(ಶ್ರೀ. ಎಸ್.ಪ್ರಭಾಕರ್)
ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್–152 ಎಸ್.ಜಿ.ಪಾಳ್ಯ

<u>ಪ್ರತಿಯನ್ನು:</u>

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ.ಲೇಔಟ್ ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೋರಮಂಗಲ ಉಪ–ವಿಭಾಗ ರವರಿಗೆ ಮುಂದಿನ ಕ್ರಮಕ್ಕೆ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕೆ
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲಮಂಡಳಿ, ಬಿ.ಟಿ.ಎಂ ರವರಿಗೆ ಮುಂದಿನ ಕ್ರಮಕ್ಕೆ
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ(ದ) ರವರಿಗೆ ಮುಂದಿನ ಕ್ರಮಕ್ಕೆ



Scanned with CamScanner